## ಶ್ರೀ ಉಡುಪಿ ಫಲಿಮಾರು ಮಠದ ಶ್ರೀ ವಿದ್ಯಾಮಾನ್ಯ ತೀರ್ಥರಿಗೆ

# ಬಹಿರಂಗ ಪತ್ರ

ಭಾರತೀಯ ಸನಾತನ ವೈದಿಕ ಸಂಸ್ಕೃತಿ, ತತ್ತ್ವಜ್ಞಾನಗಳು ಈ 20 ನೇ ಶತಮಾನದಲ್ಲಿಯೂ ತಮ್ಮ ಲೋಕೋತ್ತರ ವೈಶಿಷ್ಟ್ಯ ಉಳಿಸಿಕೊಂಡಿರುವುದಕ್ಕೆ ಮುಖ್ಯ ಕಾರಣ:- 1200 ವರ್ಷಗಳ ಹಿಂದೆ ಭಗವತ್ಪಾದ ಶ್ರೀ ಶಂಕರರು ಸಾಧಿಸಿದ ವೈದಿಕ ಮತದ ಪುನರುದ್ಧಾರ ಕಾರ್ಯ. ಅಂದು ಆಚಾರ್ಯ ಶ್ರೀ ಶಂಕರರು ಈ ಮಹತ್ಕಾರ್ಯ ಸಾಧಿಸಿದ್ದರಿಂದಲೇ ಈ 20ನೇ ಶತಮಾನದ ಕೊನೆಯ ದಿನಗಳಲ್ಲಿ ಕೂಡ ನಾವು ಭಾರತೀಯರು, ವೈದಿಕ ಸಂಸ್ಕೃತಿಯ ಅನುಯಾಯಿಗಳು ಎಂದು ಹೆಮ್ಮೆ ಪಟ್ಟುಕೊಳ್ಳುವ ಅವಕಾಶ ಲಭಿಸಿದೆ.

ಭಗವತ್ಪಾದ ಶ್ರೀ ಶಂಕರರು ಅದ್ವೈತ ಸಿದ್ಧಾಂತವನ್ನು ಭದ್ರ ಬುನಾದಿಯ ಮೇಲೆ ಪುನಃ ಪ್ರತಿಷ್ಠಾಪಿಸಿದ್ದರಿಂದಲೇ ವೈದಿಕಧರ್ಮ ಈ ನೆಲದಲ್ಲಿ ಸ್ಥಿರವಾಗಿ ನಿಂತಿದೆ. ಆಚಾರ್ಯ ಶ್ರೀ ಶಂಕರರ ನಂತರದ ಶತಮಾನಗಳಲ್ಲಿ ವಿಶಿಷ್ಟಾದ್ವೈತ-ದ್ವೈತ ಮುಂತಾದ ಸಿದ್ಧಾಂತಗಳ ಉಗಮವಾದುದು ಈ ತಳಹದಿಯ ಮೇಲೆಯೇ ಎಂಬುದನ್ನು ವಿಚಾರಶೀಲರೂ ತತ್ತ್ವ ಚಿಂತಕರೂ ಆದ ಪೌರ್ವಾತ್ಯ ಪಾಶ್ಚಾತ್ಯ ಪಂಡಿತರು ಮತ್ತು ಸಂಶೋಧಕರು ಸ್ಪಷ್ಟ ಪಡಿಸಿದ್ದಾರೆ.

ವೇದ ವೃಕ್ಷದ ಮೂರು ಶಾಖೆಗಳಂತಿರುವ ಈ ಮೂರು ಸಿದ್ಧಾಂತಗಳ ವಿಚಾರ ಧಾರೆಯಲ್ಲಿ ಪರಸ್ಪರ ವ್ಯತ್ಯಾಸಗಳಿದ್ದರೂ ಎಲ್ಲದರ ಅಂತಿಮ ಗುರಿ ಮಾತ್ರ ಒಂದೇ, ಅದೇ ಪರಮಾರ್ಥ ಸಾಧನೆ. ಈ ಮೂರು ಸಿದ್ಧಾಂತ ಮತಗಳಲ್ಲಿ ಒಂದೊಂದನ್ನು ತಮ್ಮದೆಂದು ಅಂಗೀಕರಿಸಿ ಅನುಸರಿಸಿಕೊಂಡು ಬರುತ್ತಿರುವವರೆಲ್ಲರೂ ಒಟ್ಟಿನಲ್ಲಿ ಆಸ್ತಿಕರೆಂದೇ ಹೆಸರಿಸಲ್ಪಟ್ಟಿದ್ದಾರೆ. ಅದರಂತೆ ಭಾರತೀಯ ತತ್ತ್ವಜ್ಞಾನ, ಅಧ್ಯಾತ್ಮಿಕತೆಗಳ ಹೆಸರಿನೊಡನೆ ಶ್ರೀ ಶಂಕರ, ರಾಮಾನುಜ, ಮಧ್ವ ಎಂಬ ಮೂರು ಸಿದ್ಧಾಂತಗಳು ಪ್ರವರ್ತಕ ಆಚಾರ್ಯರುಗಳ ಹೆಸರೂ ಪರಿಗಣಿಸಲ್ಪಡುತ್ತಿದೆ.

ರಾಜ ಮಹಾರಾಜರುಗಳ ಕಾಲದಲ್ಲಿ ಈ ಸಿದ್ಧಾಂತಗಳ ಅನುಯಾಯಿಗಳ ಮಧ್ಯೆ ಕೆಲವು ಸಲ ವಾದ-ವಿವಾದ, ಖಂಡನೆ-ಮಂಡನೆ ನಡೆಯುತ್ತ, ವಿರಸಕ್ಕೆ ಕಾರಣವಾಗುತ್ತಿದ್ದುದುಂಟು. ಆದರೆ ಅವೆಲ್ಲ ಕೇವಲ ಅಲ್ಪ ಸಂಖ್ಯೆಯ ಪಂಡಿತ ಮಂಡಲಿಗಷ್ಟೇ ಸೀಮಿತವಾದವುಗಳು. ಈ 20ನೇ ಶತಮಾನದಲ್ಲಿಯಂತೂ ಆಯಾಯ ಸಿದ್ಧಾಂತಗಳ ಅನುಯಾಯಿಗಳೆಂದುಕೊಳ್ಳುವ ಆಸ್ತಿಕ ಜನಸಾಮಾನ್ಯರಲ್ಲಿ 100ಕ್ಕೆ 99ರಷ್ಟು ಮಂದಿಗೆ ಈ ಬಗೆಯ ಪಾಂಡಿತ್ಯ ಪ್ರದರ್ಶನದ ಸ್ಪರ್ಧೆ ಮೇಲಾಟದಲ್ಲಿ ಪ್ರವೃತ್ತಿ-ಆಸಕ್ತಿ-ಅಭಿರುಚಿ ಸ್ವಲ್ಪವೂ ಇಲ್ಲ. ಇಂದು ನಮ್ಮೆಲ್ಲರ ಮುಂದೆ ಇರುವ ಗಂಭೀರ-ಜ್ವಲಂತ ಸಮಸ್ಯೆಯೆಂದರೆ ಇಂದಿನ ಯುವ ಜನತೆ ಮಿತಿ ಮೀರಿ ಪಾಶ್ಚಾತ್ಯ ಸಂಸ್ಕೃತಿಯ ದಾಸರಾಗುತ್ತ ಅಮೂಲ್ಯ ವೈದಿಕ ಸಂಸ್ಕೃತಿಯ ಬಗ್ಗೆ ತಳೆದಿರುವ ಜಿಗುಪ್ಸೆ-ಅನಾಸಕ್ತಿಗಳನ್ನು ನಿವಾರಿಸುವುದು ಹೇಗೆ ಎಂಬುದು.

ಅಖಿಲ ಕರ್ನಾಟಕ ಬ್ರಾಹ್ಮಣಮಹಾಸಭೆ ಈ ತ್ರಿಮತಸ್ಥರನ್ನೂ ಒಳಗೊಂಡ ಬ್ರಾಹ್ಮಣಜನಾಂಗಕ್ಕೆ ರಾಜಕೀಯ – ವ್ಯಾವಹಾರಿಕ – ಔದ್ಯೋಗಿಕ– ಲೌಕಿಕ ಪ್ರಕಾರಗಳೆಲ್ಲದರಲ್ಲಿಯೂ ಒದಗುತ್ತಿರುವ ಪ್ರಬಲ ಆಘಾತವನ್ನು ತಡೆಗಟ್ಟಲು, ಕಂದಿಹೋಗುತ್ತಿರುವ ವೈದಿಕ ಸಂಸ್ಕೃತಿಯನ್ನು ಪುನರುಜ್ವಲಗೊಳಿಸಲು ಎಲ್ಲರನ್ನೂ ಒಂದು ಸಂಘಟನೆಯ ಆಶ್ರಯಕ್ಕೆ ತಂದು ಒಮ್ಮತ-ಒಗ್ಗಟ್ಟುಗಳಿಂದ ಎಲ್ಲರೂ ಮುನ್ನಡೆಯುವುದಕ್ಕೆ ಹಲವು ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಶ್ರಮಿಸುತ್ತಿದೆ. ಆದರೆ ಇದನ್ನಾಗಲೀ ಇಂದಿನ ವಾಸ್ತವಿಕ ಅಗತ್ಯವೇನೆಂಬುದನ್ನಾಗಲೀ ಸ್ವಲ್ಪವೂ ಪರಿಗಣಿಸದೆ ದ್ವೈತಸಿದ್ಧಾಂತ ಪ್ರವರ್ತಕ ಶ್ರೀ ಮಧ್ವರು ಉಡುಪಿಯಲ್ಲಿ ಪ್ರತಿಷ್ಠಾಪಿಸಿದ 8 ಮಠಗಳ ಪೈಕೀ ಶ್ರೀ ಫಲಮಾರು ಮಠಾಧೀಶರಾದ ನೀವು (ಶ್ರೀ ವಿದ್ಯಾಮಾನ್ಯ ತೀರ್ಥರು) ಅದ್ವೈತ ವೇದಾಂತ-ಆಚಾರ್ಯ ಶ್ರೀ ಶಂಕರರು ಮತ್ತು ಸ್ಮಾರ್ತರ ಅವಹೇಳನೆಯಲ್ಲಿ ತೊಡಗಿ ಸಮಗ್ರ ಬ್ರಾಹ್ಮಣ ಸಮಾಜದ ನಡುವೆ ವೈಷಮ್ಯದ ಕಿಚ್ಚು ಹೊತ್ತಿಸುತ್ತಿರುವುದು ವಿಚಾರ ಶೀಲರಾದವರೆಲ್ಲರಿಗೂ ನೋವು ಉಂಟುಮಾಡಿದೆ. ಅದರಲ್ಲಿಯೂ ದಿನಾಂಕ 14.12-88 ರಂದು ನೀವು ಶ್ರೀ ಶೃಂಗೇರಿ ಶಂಕರಾಚಾರ್ಯ ಪೀಠದ ಹಿರಿಯ ಶ್ರೀ ಜಗದ್ಗುರುಗಳವರ ದರ್ಶನಕ್ಕೆ ಹಟಾತ್ತನೆ ಬಂದು-ನಿಮ್ಮ ಬೇಳೆ ಬೇಯಿಸಿಕೊಳ್ಳಲಾರದೆ ವಾಪಸು ಹೋಗಿ ಅಬದ್ಧಗಳ ಕಂತೆಯಾಗಿರುವ "ದ್ವೈತ ವಿಜಯ" ಎಂಬುದನ್ನು ಬರೆದು ಮುದ್ರಿಸಿ-ಸಮಾಜದಲ್ಲಿ ಹಂಚುತ್ತಿರುವ ಉಪದ್ವ್ಯಾಪಕ್ಕೆ ಪ್ರಾರಂಭಿಸಿರುವಿರಾದ್ದರಿಂದ ನಿಮಗೆ ಈ ಕೆಳಗಿನ ವಿಷಯಗಳನ್ನು ತಿಳಿಯಪಡಿಸುವುದು ಅನಿವಾರ್ಯವಾಯಿತು.



ಭಾರತೀಯ ಸನಾತನ ಧರ್ಮಕ್ಕೆ ಇತರ ಅವೈದಿಕ ಮತಾಂಧರಿಂದಲೂ ಇಂದು ಹೆಚ್ಚಿನ ಸಂಕಷ್ಟ ಒದಗಿರುವುದು ವೈದಿಕವೇ ಆದ ದ್ವೈತ ಮತಾನುಯಾಯಿಗಳಾದ ನಿಮ್ಮಿಂದಲೇ ಎಂಬುದು ಒಂದು ವಿಪರ್ಯಾಸವೇ ಸರಿ. ಯಾವಾಗಲೂ ಕೊಸರಿಕೊಂಡದ್ದು, ಕಲ್ಪಿಸುವವರು ತಮ್ಮದೇ ಶ್ರೇಷ್ಠವೆಂದು ಸಾಧಿಸಲು ಎಷ್ಟು ಕೆಳಮಟ್ಟಕ್ಕಾದರೂ ಇಳಿಯಬಲ್ಲರೆಂಬುದಕ್ಕೆ ನೀವೇ ಒಂದು ಉದಾಹರಣೆ. ನೀವೇನೂ ಶೃಂಗೇರಿ ಪರಂಪರೆಯ ಶಿಷ್ಯರಲ್ಲ ಅಥವಾ ಸೌಹಾರ್ದ-ಸಮನ್ವಯದ ದೃಷ್ಟಿಯ ಸಮಾಲೋಚನೆ ಇಂತಹ ಉತ್ತಮ ಉದ್ದೇಶಗಳು ನಿಮ್ಮಲ್ಲಿ ಇಲ್ಲ. ಇದ್ಯಾವುದೂ ಇಲ್ಲದಿರುವಾಗ ನೀವು ಹೇಳದೆ-ಕೇಳದೆ ಶ್ರೀ ಶೃಂಗೇರಿ ಮಠಕ್ಕೆ ಹೋಗಬೇಕಾದ ಪ್ರಮೇಯವೇನಿತ್ತು ? "ಒಂದು ಮಾತನ್ನು ಮೊದಲೇ ತಿಳಿಸಿ ಬಂದಿದ್ದರೆ ಪೀಠಾಧಿಪತಿಗಳಿಗೆ ತಕ್ಕ ಗೌರವ ನೀಡಿ ನಿಮ್ಮನ್ನು ಬರಮಾಡಿಕೊಳ್ಳುತ್ತಿದ್ದೆವು. ನೀವು ಹೇಳದೆ-ಕೇಳದೆ ಬಂದುಬಿಟ್ಟಿದ್ದೀರಿ" ಎಂದು ಶ್ರೀ ಜಗದ್ಗುರುಗಳು ನಿಮಗೆ ಹೇಳಬೇಕಾಗಿ ಬಂದುದು ನಿಮ್ಮ ವರ್ತನೆಯಿಂದಲೇ ಅಲ್ಲವೇ ? ನೀವು ಬರೆದು ತಂದಿದ್ದ ಪ್ರಶ್ನಾವಳಿಯನ್ನು ಅವರ ಮುಂದೆ ಇಟ್ಟು "ನಾವು ನಿಮ್ಮಲ್ಲಿ ಈ ಪ್ರಶ್ನೆಗಳಿಗೆ ಉತ್ತರ ತಿಳಿಯಲೆಂದೇ ಬಂದಿದ್ದೇವೆ." ಉತ್ತರ ಕೊಡಿ ಎಂದು ಕೇಳಿಕೊಂಡಿರಿ. ಆಗಲೇ ಶ್ರೀ ಜಗದ್ಗುರುಗಳವರು "ನಿಮ್ಮ ಸಂಸ್ಕಾರಾನುಗುಣ ನಿಮ್ಮ ಚಿಂತನೆ. ನಮ್ಮ ಸಂಸ್ಕಾರಾನುಗುಣ ನಮ್ಮ ಚಿಂತನೆ. ಬೃಹದಾರಣ್ಯಕೋಪನಿಷತ್ ಪ್ರಥಮಾಧ್ಯಾಯದ ಚತುರ್ಥ ಬ್ರಾಹ್ಮಣದಲ್ಲಿ 10ನೆಯ ಮಂತ್ರ ಬ್ರಹ್ಮಾವೇದೀತ್ ವಾಕ್ಯದ ಕಡೆಯಲ್ಲಿ "ಜೀವ-ಬ್ರಹ್ಮಾಭೇದ" ಪ್ರತಿಪಾದಿತವಾಗಿದೆ. ನೀವು ಅಂತ್ಯ ವಾಕ್ಯಕ್ಕೆ ಪ್ರಾಬಲ್ಯ, ಹೇಳದೆ ಮುಂದೆ ಹೋಗುವಿರಿ. ನಾನು ನನ್ನ ಸಂಸ್ಕಾರದಂತೆ ಹೇಳುತ್ತೇನೆ. ತೀರ್ಮಾನ ಕೊಡುವವರಿಲ್ಲ. ಇನ್ನು ನೀವು ಬರೆದು ತಂದಿರುವ ಪ್ರಶ್ನೆಗಳಿಗೆ ಉತ್ತರವನ್ನು ನಮ್ಮ ಮಠದ ಶಿಷ್ಯರಾದ ಯಾರಾದರೊಬ್ಬ ಶಾಸ್ತ್ರಿಗಳ ಬಳಿ ಹೋಗಿ ಕೇಳಿ. ಅವರೇ ಉತ್ತರ ಕೊಡುತ್ತಾರೆ. ಈ ಬಗೆಯ ಚರ್ಚೆಯಿಂದ ಈಗ ಜನಸಾಮಾನ್ಯರಿಗೆ ಯಾವ ಉಪಯೋಗವೂ ಇಲ್ಲ. ನಾನು ಹೇಳಿದಂತೆ ನಾನೂ ನೀವೂ ಇಲ್ಲಿ ಕುಳಿತು ವಾದ ಮಾಡಿದರೆ ತೀರ್ಮಾನ ಹೇಳುವವರು ಯಾರು ? ಆದಕ್ಕೆ ಎರಡೂ ಕಡೆಯ ಪಂಡಿತರು ಮತ್ತು ನಿಷ್ಪಕ್ಷಪಾತಿಗಳಾದ ನಿರ್ಣಾಯಕರು ಇದ್ದು ವಾದ ನಡೆದು, ಸತ್ಯವು ಬಹಿರಂಗವಾಗಿಯೇ ತೀರ್ಮಾನವಾಗಬೇಕಾದುದೇ ಸೂಕ್ತ. ನೀವು ಹೋಗಿಬನ್ನಿ," ನಿಮಗೆ ಖಂಡ ತುಂಡವಾಗಿ ತಿಳಿಯ ಹೇಳಿದ ಮಾತುಗಳು ಇವು.

ಆದರೆ ಶೃಂಗೇರಿಯಿಂದ ನಿರ್ಗಮಿಸಿದ ನೀವು ನಿಮ್ಮ ಇದುವರೆಗಿನ ಅನೇಕ ವರ್ಷಗಳ ಕೃತಿಯಿಂದ ನೀವು ಏನು ಕುತಂತ್ರ ಮಾಡುವಿರೆಂದು ಊಹಿಸಿದ್ದೆವೋ

ಅದನ್ನೇ ಮಾಡಿದ್ದೀರಿ. ನಿಮ್ಮ ಕ್ಷುಲ್ಲಕ ತನವನ್ನು ಒಂದೊಂದಾಗಿ ನಿಮಗೇ ತೋರಿಸಿಕೊಡಬೇಕಾಗಿ ಬಂದಿದೆ. ನೀವು ಶ್ರೀರಮಣನ ಆರಾಧಕರು. ಅಷ್ಟೇ ಅಲ್ಲ ! ಅವನು ನಿಮ್ಮವರಿಗೆ ಮಾತ್ರ ಅನುಗ್ರಹ ಮಾಡತಕ್ಕವನೆಂದು ನಂಬಿಕೊಂಡವರು. ಆ ದೇವರು, ನಿಮ್ಮ ಗುರು ಮಧ್ವರು, ಮತ್ತೆ ಸ್ವತಃ ನೀವು ಈ ಹೆಸರಿನ ಹಿಂದುಗಡೆಗೆ "ಶ್ರೀ ಪದವನ್ನು ತಪ್ಪದೆ ಉಪಯೋಗಿಸಿಕೊಂಡಿರುವುದು. ನಿಮ್ಮ ದ್ವೈತ ವಿಜಯದಲ್ಲಿ" ಸ್ಪಷ್ಟವಾಗಿದೆ. ಆದರೆ ಅದರಲ್ಲಿ ರುದ್ರ, ದೇವರು, ಶಂಕರರು ಮತ್ತು ಶೃಂಗೇರಿಯ ಜಗದ್ಗುರುಗಳವರನ್ನು ಉಲ್ಲೇಖಿಸುವಾಗ ನೀವು ತಪ್ಪಿ ಕೂಡ "ಶ್ರೀ" ಶಬ್ದವನ್ನು ಸೇರಿಸಿಲ್ಲ. ಶ್ರೀರಮಣನ ಆರಾಧಕರಾದ ನೀವು ಶ್ರೀ ಶಬ್ದವನ್ನೂ ಸಹ ಬೇರೆಯವರಿಗೆ ಕೊಡಬಾರದೆನ್ನುವ ಜಿಪುಣ ಬುದ್ಧಿ !

ದ್ವೈತ ವಿಜಯದಲ್ಲಿ ನೀವು ಶೃಂಗೇರಿ ಶ್ರೀ ಜಗದ್ಗುರುಗಳಿಗೂ ನಿಮಗೂ ಸಮಾಗಮ ನಡೆಯಿತೆಂದು ಬರೆಕೊಂಡಿದ್ದೀರಿ. ಹೇಳದೆ ಕೇಳದೆ ನೀವು ಕುಹಕತನದ ಪೂರ್ವಸಿದ್ಧತೆ ಮಾಡಿಕೊಂಡು ಬಂದು ಅವರ ದರ್ಶನ ಮಾಡಿದ್ದು ಸಮಾಗಮ ಹೇಗಾಗುತ್ತದೆ ? ಗೌರವ, ಸಮಾನತೆ, ಸೌಹಾರ್ದಗಳಿಂದ ಪರಸ್ಪರ ಭೆಟ್ಟಿಯಾಗುವುದು ಸಮಾಗಮವೇ ಹೊರತು ನೀವು ನಡೆದುಕೊಂಡ ರೀತಿ ಸಮಾಗಮ ಶಬ್ದದ ಗೌರವಕ್ಕೆ ಸ್ವಲ್ಪವೂ ಸರಿ ಹೊಂದುವುದಿಲ್ಲ.

ಶೃಂಗೇರಿ ಜಗದ್ಗುರುಗಳು (ನೀವು ಹೇಳುವುದು ಶೃಂಗೇರಿ ಸ್ವಾಮಿಗಳು ಎಂದು ಮಾತ್ರ) ನನ್ನ ಪ್ರಶ್ನೆಯನ್ನು (ನೀವು ಬರೆದು ತಂದ ಪ್ರಶ್ನೆಗಳ ಕಾಗದವನ್ನಷ್ಟೇ ಶ್ರೀ ಜಗದ್ಗುರುಗಳ ಕೈಯಲ್ಲಿ ಕೊಟ್ಟಿದ್ದರೂ ಅದನ್ನು ಮರೆಮಾಚಿ ನಿಮ್ಮ ಹೆಗ್ಗಳಿಕೆಗಾಗಿ ಪ್ರಶ್ನೆಗಳನ್ನು ಆ ಕ್ಷಣದಲ್ಲಿಯೇ ಬರೆದು ಕೊಟ್ಟಿದ್ದು ಎಂದೇ ಬರೆದು ಕೊಂಡಿದ್ದೀರಿ) ಶೃಂಗೇರಿ ಸ್ವಾಮಿಗಳು ಓದಿ ನೋಡಿದರು ಅವರು ತರ್ಕ-ವೇದಾಂತಗಳಲ್ಲಿ ಶ್ರೇಷ್ಠ ವಿದ್ವಾಂಸರಾದರೂ ಈ ಪ್ರಶ್ನೆಗಳಿಗೆ ಉತ್ತರ ಹೇಳುವುದು ಅವರಿಗೆ ಸಾಧ್ಯವಿಲ್ಲ. "ಕಾಲಟಿಯಲ್ಲಿರುವ ರಾಮಚಂದ್ರ ಶಾಸ್ತ್ರಿಗಳು ಉತ್ತರವನ್ನು ಕೊಡಬಹುದು ಎಂದು ಹೇಳಿದರು. ಆದರೆ ಇದುವರೆಗೆ ಯಾವ ಅದ್ವೈತಿಯೂ ಉತ್ತರಿಸಿಲ್ಲದ ಈ ಪ್ರಶ್ನೆಗಳಿಗೆ ರಾಮಚಂದ್ರ ಶಾಸ್ತ್ರಿಗಳೂ ಕೂಡ ಉತ್ತರ ಕೊಡಲಾರರೆಂಬುದೇ ನಿರ್ಣಯ" ಎಂದು ಶೃಂಗೇರಿಯ ಶ್ರೀ ಜಗದ್ಗುರು ಸಮ್ಮುಖದಲ್ಲಿ ನಡೆದ ವಾಸ್ತವಿಕ ವಿದ್ಯಮಾನಗಳಿಗೆ ವಿರುದ್ಧವಾದ ಚಿತ್ರವನ್ನು ಜನತೆಯ ನಡುವೆ ಪ್ರತಿಬಿಂಬಿಸಲು ನೀವು ತೊಡಗಿರುವಿರೇಕೆ ? ಮತಾಂಧತೆ ವ್ಯಕ್ತಿಯೊಬ್ಬನನ್ನು ಎಷ್ಟು ಕೆಳಮಟ್ಟಕ್ಕೆ ಒಯ್ಯಬಹುದೆಂಬುದು ಇದರಿಂದ ನಿಚ್ಚಳವಾಗುತ್ತಿದೆ.



" ಶ್ರೀ ಶೃಂಗೇರೀ ಸ್ವಾಮಿಗಳು ಉತ್ತರ ಹೇಳದಿದ್ದುದನ್ನು ನೋಡಿದವರು" "ಪೀಠ ವೇದ ವ್ಯಾಸಾಚಾರ್ಯರು" ಎಂಬುದಾಗಿ ನಿಮ್ಮವರೊಬ್ಬರನ್ನು ಸಾಕ್ಷಿಯಾಗಿ ಕೊಟ್ಟಿದ್ದೀರಿ. ಆತ್ಮಪ್ರತ್ಯಯವಿಲ್ಲದ ಬೇರೆಯವರು ತಮ್ಮ ಮಾತು ನಂಬಲಾರರೆಂಬ ಶಂಕೆ ಸಹಜ ಆದ್ದರಿಂದಲೇ ನಿಮ್ಮ ಸಂಗಡ ಕರೆತಂದಿದ್ದ ಒಬ್ಬರನ್ನೇ ಸಾಕ್ಷಿಯಾಗಿ ಇಟ್ಟುಕೊಂಡಿರಿ. ಇದೊಂದು ರೀತಿಯ ಅನುಕೂಲಸಿಂಧು. "ಬೇಲೀ ಗೂಟಕ್ಕೆ ಓತಿಕ್ಯಾತದ ಸಾಕ್ಷಿ" ಎಂದ ಹಾಗೆ. ಮತ್ತೆ ನಿಮ್ಮ ಕಡೆಯ ಸಾಕ್ಷಿಯಾಗಿ ಅಲ್ಲಿ ಇದ್ದವರು ಒಬ್ಬರೆ. ಆದರೆ ಶ್ರೀ ಶೃಂಗೇರಿ ಮಠದ ಪುರೋಹಿತ ಗಣಪತಿ ಅವಧಾನಿ, ಆಪ್ತ ಸಹಾಯಕ ಶಂಕರ ಶರ್ಮಾ ಮತ್ತು ಮಹಾಬಲ ಬಾಯರ್ ಹೀಗೆ ಮೂರು ಜನ ಪ್ರತ್ಯಕ್ಷದರ್ಶಿಗಳು ಇರುವಾಗ ನಿಮ್ಮ ಒಬ್ಬ ಸಾಕ್ಷಿಯ ಮಾತಿಗೆ ಮಹತ್ವ ಹೇಗೆ ಸಿಗುತ್ತದೆ ?

ಸದ್ಗುರು ಪರಂಪರೆಯಿಂದ ಬಂದ ಸನ್ಯಾಸಿಯೊಬ್ಬರು ಈ ರೀತಿ ಸುಳ್ಳು – ತಟವಟ – ಕುತಂತ್ರಗಳ ಬಳಿಯೂ ಸುಳಿಯಲಾರರು. ನೀವು "ಶೃಂಗೇರೀ ಸ್ವಾಮಿಗಳು ನಿಮ್ಮ ಪ್ರಶ್ನೆಗಳಿಗೆ ಉತ್ತರ ಕೊಡದೆ ಇರಲು ಕಾರಣವೆಂದರೆ ಸರ್ವಜ್ಞರಾದ ಶ್ರೀ ಮಧ್ವಾಚಾರ್ಯರು ಅದ್ವೈತಶಾಸ್ತ್ರದ ಮೂಲವನ್ನೇ ಕೀಳುವಂತಹ ಈ ಪ್ರಶ್ನೆಗಳನ್ನು ನಮ್ಮ ಗ್ರಂಥದಲ್ಲಿ ಕೇಳಿದ್ದಾರೆ" ಎನ್ನುವಷ್ಟು ನೀಚಮಟ್ಟಕ್ಕೆ ಇಳಿದುದರಿಂದ ನಿಮ್ಮ ಮೂಲವನ್ನೇ ತೆರೆದಿಡುವುದು ಅನಿವಾರ್ಯವಾಗಿದೆ

ಶ್ರೀ ಜಗದ್ಗುರುಗಳವರು ನಿಮಗೆ ಮೊಟ್ಟಮೊದಲಿಗೇ ಬೃಹದಾರಣ್ಯಕೋಪನಿಷತ್ತಿನ ಸಂಬಂಧಪಟ್ಟ ಮಂತ್ರವ್ಯಾಖ್ಯಾನಗಳನ್ನು ತಿಳಿಸಿದ್ದಾರೆ, ಮತ್ತೆ ನಿಮ್ಮ ಪ್ರಶ್ನೆಗಳಿಗೆ ಯಾರಾದರು ಶಾಸ್ತ್ರಿಗಳು ಉತ್ತರ ಹೇಳುತ್ತಾರೆ ಹೋಗಿ ಕೇಳಿ ಎಂದಿದ್ದಾರೆ. ಇದರಲ್ಲಿ ಮೊದಲ ವಿಷಯವನ್ನು ಕೈ ಬಿಟ್ಟಿದ್ದೀರಿ. ಎರಡನೆಯ ವಿಷಯವನ್ನು "ಕಾಲಟಿ ರಾಮಚಂದ್ರ ಶಾಸ್ತ್ರಿಗಳು ಉತ್ತರ ಹೇಳಬಹುದು" ಎಂದು ಶ್ರೀ ಜಗದ್ಗುರುಗಳು ಹೇಳಿದರು ಎಂಬುದಾಗಿ ನೀವು ಬರೆಯುವ ಮೂಲಕ ಹಸೀಸುಳ್ಳು ಹೇಳುವ ಕೆಲಸವನ್ನೂ ಮಾಡಿದ್ದೀರಿ, ಮತ್ತೆ ನೀವು ಶೃಂಗೇರಿ ಸ್ವಾಮಿಗಳನ್ನು ತರ್ಕ - ವೇದಾಂತಗಳಲ್ಲಿ ಶ್ರೇಷ್ಠ ವಿದ್ವಾಂಸರೆಂದು ಉಲ್ಲೇಖಿಸಿರುವುದು ಕೂಡಾ ನಿಮ್ಮ ಸಿದ್ಧಾಂತದ ಹೆಗ್ಗಳಿಕೆ ಸಾಧಿಸಲೆಂದೇ ಹೊರತು ಸಹೃದಯತೆಯಿಂದ ಸರ್ವಥಾ ಅಲ್ಲ. 1200 ವರ್ಷದಿಂದ ಸಮರ್ಥವಾಗಿ ಮುನ್ನಡೆಯುತ್ತ-ಅಸಂಖ್ಯಾತ ಜನರ ಗೌರವಾದರಗಳಿಗೆ ಪಾತ್ರರಾಗುತ್ತಿರುವ ಶ್ರೀ ಶಂಕರ ದಕ್ಷಿಣಾಮ್ನಾಯ ಪೀಠದ ವಿದ್ಯಾವಂತ ಜಗದ್ಗುರುಗಳಿಗೆ ದ್ವೈತ ಶಾಸ್ತ್ರದ ಪ್ರಶ್ನೆಗಳಿಗೆ ಉತ್ತರ ಕೊಡಲು ಸಾಧ್ಯವಾಗದ್ದರಿಂದ ಅದ್ವೈತಕ್ಕಿಂತ ದ್ವೈತ ಶ್ರೇಷ್ಠವೆಂಬುದು ಸಿದ್ಧವಾಯಿತು ಎಂದು ನಿಮ್ಮ ಬೆನ್ನು ನೀವೇ ತಟ್ಟಿಕೊಳ್ಳುವ ಕ್ಷುದ್ರ ಚಾಪಲ್ಯ.

ನಿಮ್ಮ ಶ್ರೀ ಮಧ್ವಾಚಾರ್ಯರ ಜನ್ಮದಾತರು ಮೊದಲ್ಗೊಂಡು ಅವರ ಪೂರ್ವಜರೆಲ್ಲ ಅನುಸರಿಸಿ ಕೊಂಡುಬಂದುದು ಶ್ರೀ ಶಂಕರಭಗವತ್ಪಾದರ ಸಂಪ್ರದಾಯ ಎಂಬುದನ್ನು ನಿಮಗೆ ನೆನಪುಮಾಡಿಕೊಡಬೇಕಾಗಿದೆ. ಶ್ರೀ ಮಧ್ವಾಚಾರ್ಯರಿಗೆ ಸಂನ್ಯಾಸದೀಕ್ಷೆನೀಡಿ ವೇದಾಂತಕಲಿಸಿದ ಗುರು ಶ್ರೀ ಅಚ್ಯುತಪ್ರೇಕ್ಷರೇ ಶ್ರೀ ಶಂಕರ ಸಂಪ್ರದಾಯದವರು. ಆದರೆ ಮುಂದೆ ಗುರುವಿಗೇ ತಿರುಮಂತ್ರಹಾಕಿ ಎಲ್ಲ ಶಬ್ದಗಳಿಗೂ ಅಪಾರ್ಥ ಕಲ್ಪಿಸಿ ಕೇವಲ ಪ್ರಸಿದ್ಧಿ ಪಡೆಯುವ ಹಂಬಲದಿಂದ ತಮ್ಮದೇ ಮತವೊಂದನ್ನು ನಿರ್ಮಿಸಿ ಕೆಲವು ಅನುಯಾಯಕರನ್ನು ಕೂಡಿಸಿಕೊಂಡು ಪ್ರಚಾರಮಾಡಿದ ಮತವೇ ಇದು. ಆ ಅನುಯಾಯಕರೆಲ್ಲ ಇದರಲ್ಲಿ ಸೇರಿಸಿಕೊಂಡ ಸಂಕಟಕ್ಕೆ "ಇದೇ ಸರಿ" ಎಂದು ಗೋಣುಹಾಕಿದರು. ಶ್ರೀ ಅಚ್ಯುತ ಪ್ರೇಕ್ಷರು "ಅದು ಅವರಪಾಡು ಏನಾದರೂ ಮಾಡಿಕೊಳ್ಳಲಿ" ಎಂದು ಸುಮ್ಮನಾದರು. ಸ್ವಲ್ಪ ವಿಚಾರಶೀಲರಾದ ಯಾರೂ ನಿಮ್ಮ ಮತವನ್ನು ಅನುಸರಿಸಲಾರರು ಎಂಬುದನ್ನು ನೀವೆಲ್ಲ ಎಷ್ಟು ಬಗೆಯಲ್ಲಿ ಪ್ರಚಾರಮಾಡಿ ಭಗೀರಥ ಪ್ರಯತ್ನನಡೆಸುತ್ತಿದ್ದರೂ ನಿಮ್ಮ ಸಿದ್ಧಾಂತದ ಅನುಯಾಯಿಗಳ ಸಂಖ್ಯೆ ತೀರಾ ಕಡಿಮೆ ಪ್ರಮಾಣದಲ್ಲಿ ಉಳಿಯುವುದೇ ಸ್ಪಷ್ಟಗೊಳಿಸುತ್ತಿದೆ.

ಸಂನ್ಯಾಸ ಸ್ವೀಕರಿಸಿ ಮತ್ತೆ ಅದನ್ನು ತ್ಯಜಿಸಿ ಗೃಹಸ್ಥನಾಗಬಹುದು. ಸಮುದ್ರಯಾನ, ವಿದೇಶವಾಸ, ಮಾಡಬಹುದು. ಮಹಿಳೆಯರೊಂದಿಗೆ ಮಠದಲ್ಲೇ ವಾಸಿಸಬಹುದು. ಇಂತಹವುಗಳಿಗೆಲ್ಲಾ ಮುಕ್ತ ಅವಕಾಶ. ಶಾಸ್ತ್ರವಿಹಿತವಾದ ಯಾವ ಕಟ್ಟುಪಾಡುಗಳಿಗೂ ಒಳಗಾಗಬೇಕಾದ್ದಿಲ್ಲ. ಇಂತಹ ಉಚ್ಛೃಂಖಲ ವೃತ್ತಿಗೆ ಧರ್ಮಪೀಠಗಳಲ್ಲಿಯೇ ಆಸರೆ ದೊರೆತರೆ ಅದು ಈಗಾಗಲೇ ಪಾಶ್ಚಾತ್ಯ ಭೋಗ ಜೀವನವನ್ನು ಪರಮಶ್ರೇಷ್ಠವೆಂದು ತಿಳಿದವರಿಗೆ ಮತ್ತಷ್ಟು ಅಪ್ಯಾಯಮಾನವೆನಿಸಿ ಆದರ್ಶಪ್ರಾಯವಾದೀತೇ ಹೊರತು ಆಚಾರ್ಯರು ಬೋಧಿಸಿದ ಪಾರಮಾರ್ಥಿಕ ಸತ್ಯಸಾಧನೆಯ ದಾರಿ ಇದಲ್ಲ. ಪ್ರಸಿದ್ಧ ಸರ್ವಜ್ಞ ಕವಿ "ದಂಡಿಸದೆ ದೇಹವನು, ಖಂಡಿಸದೆ ಕರಣವನು! ಉಂಡುಂಡು ಸ್ವರ್ಗವನು ಆಡರಲ್ಲೆ ! ಅದನೇನು....——? " ಈ ವಚನದಲ್ಲಿ ಖಚಿತವಾಗಿ ಹೇಳಿರುವುದು ಅದನ್ನೇ.

ಶ್ರೀ ಶೃಂಗೇರಿ ಜಗದ್ಗುರುಗಳವರ ಸಮ್ಮುಖದಲ್ಲಿ ನಿಮ್ಮ ಕಡೆಯ ಸಾಕ್ಷಿಯ ದುರಿಗೇ ಶ್ರೀ ಜಗದ್ಗುರುಗಳು ನಿಮಗೆ ಹೇಳಿದ ಮಾತುಗಳ ಬಹುಭಾಗವನ್ನು ಮ್ಮ ಬರಹದಲ್ಲಿ ನೀವು ಮರೆಮಾಚಿರುವುದೇ ಅಲ್ಲದೇ ನಿಮ್ಮ ಪ್ರಶ್ನೆಗಳಿಗೆ ವರು ಉತ್ತರಕೊಡಲು ಸಾಧ್ಯವಾಗಲಿಲ್ಲ ಎಂಬ ಅರ್ಥಬರುವಂತೆ ವಸ್ತುಸ್ಥಿತಿ ನ್ನು ನಿಮ್ಮ ಮೂಗಿನ ನೇರಕ್ಕೆ ತಕ್ಕಂತೆ ತಿರುಚಿಕೊಂಡು ಪ್ರಚಾರಮಾಡು



ತ್ತಿದ್ದೀರಿ. ಯತಿಯೊಬ್ಬರು ಇಂತಹ ಕುಟಿಲ ತಂತ್ರದ ಆಶ್ರಯವನ್ನು ನಾವಂತೂ ಕಂಡಿಲ್ಲ ಕೇಳಿಲ್ಲ. ಶ್ರೀ ಜಗದ್ಗುರುಗಳವರು ನಿಮಗೆ ಸ್ಪಷ್ಟವಾಗಿ ಹೇಳಿದ ಮಾತು"ನಾವು ವಾದ ಮಾಡುವುದಿಲ್ಲ" ಎಂದೇ ಹೊರತು "ಉತ್ತರ ಕೊಡಲು ತಮಗೆ ಸಾಧ್ಯವಿಲ್ಲ" ಎಂದಲ್ಲ. ಶಾಸ್ತ್ರಾರ್ಥ ವಿಚಾರ-ಚರ್ಚೆ-ಖಂಡನೆ-ಮಂಡನೆಗಳ ಹಂತವನ್ನು ದಾಟಿದ ಸಂನ್ಯಾಸಿಗಳು ನಿತ್ಯ ಸತ್ಯದ ಅನುಸಂಧಾನದಲ್ಲಿ ತೊಡಗಿ ಮೇಲಿನ ಹಂತವನ್ನು ತಲುಪಬೇಕೆಂಬುದೇ ಎಲ್ಲ ಆಚಾರ್ಯರು – ಗುರುಗಳ ನಿರ್ದೇಶವೇ ವಿನಾ ಮತ್ತೆ ಮತ್ತೆ ಕೆಳಗಿನಹಂತದ ವಾದ-ವಿವಾದಗಳಿಗೆ ಇಳಿದು ಬರಬೇಕೆಂಬುದು ಸರ್ವಥಾ ಅಲ್ಲ. "ನಹಿ ನಹಿ ರಕ್ಷತಿ ಡುಕೃಞ್ಕರಣೇ" ಎಂಬ ಆಚಾರ್ಯ ಶ್ರೀ ಶಂಕರರ ಸೂಕ್ತಿ ಇದನ್ನೇ ಸ್ಪಷ್ಟವಾಗಿ ಸಾರಿ ಹೇಳುತ್ತಿದೆ. ಆದ್ದರಿಂದಲೇ ಶ್ರೀ ಜಗದ್ಗುರುಗಳು "ವಾದ ಮಾಡುವುದಿಲ್ಲ" ಎಂದು ಸ್ಪಷ್ಟವಾಗಿ ನಿಮಗೆ ತಿಳಿಯಪಡಿಸಿದ್ದು. ನೀವೇನೋ ಕಾಲ-ದೇಶ ಪರಿಸ್ಥಿತಿಗಳ ಪರಿಗಣನೆಯಲ್ಲಿದೆ ವ್ಯರ್ಥ ವಿಚಾರ-ಚರ್ಚೆ-ವಾಗ್ವಾದಗಳಲ್ಲಿಯೇ ಸದಾಕಾಲ ಆಸಕ್ತರಾಗುತ್ತೀರೆಂದ ಮಾತ್ರಕ್ಕೆ ಧರ್ಮಸೂಕ್ಷ್ಮವನ್ನು ಚೆನ್ನಾಗಿ ಬಲ್ಲ ಶ್ರೀ ಶೃಂಗೇರಿ ಜಗದ್ಗುರುಗಳವರೂ ಅದೇ ರೀತಿ ಇರುತ್ತಾರೆ ಎಂಬ ನಿರ್ಧಾರದೊಡನೆ ನೀವು ಶೃಂಗೇರಿಗೆ ಹೋದುದು ಸರಿಯಲ್ಲ. ನೀವು ಅವರಿಗೆ ಕೊಟ್ಟಿರುವ ಪ್ರಶ್ನಾವಳಿ ಮತ್ತು ನೀವು ದ್ವೈತ ವಿಜಯದಲ್ಲಿ ಬರೆದು ಪ್ರಚುರಪಡಿಸಿರುವ 10 ಅಂಶಗಳ (ಇದರಲ್ಲಿ ಕೊನೆಯ 3 ಅಂಶಗಳಂತೂ ತೀರ ಬಾಲಿಶಬುದ್ಧಿ-ಕುಹಕತನದ ಪರಮಾವಧಿಯನ್ನು ಮಾತ್ರ ಪ್ರತಿಬಿಂಬಿಸುತ್ತವೆ) ಇವು ಯಾವವೂ ಉತ್ತರಿಸಲಾರದವುಗಳಲ್ಲ. ಈ ಹಿಂದೆ ಅನೇಕ ಸಲ ಸಮರ್ಥವಾಗಿ ಖಂಡಿಸಲ್ಪಟ್ಟವುಗಳೇ. ಈಗಲೂ ಶಾಸ್ತ್ರೀಯ ಪರಿಪಾಟಿಯಿಂದಲೇ ಇವುಗಳ ಪೊಳ್ಳುತನವನ್ನು ಬಯಲಿಗೆಳೆದು ಪ್ರಚುರ ಪಡಿಸುವುದಕ್ಕೆ ಶ್ರೀ ಜಗದ್ಗುರು ಸಂಸ್ಥಾನದ ಶಿಷ್ಯರಾದ ಗೃಹಸ್ಥ ವಿದ್ವಜ್ಜನರು ವ್ಯವಸ್ಥೆಮಾಡುತ್ತಿದ್ದಾರೆ. ಆ ಕಾರ್ಯಕ್ಕೆ ಅವರು ಸಾಕು.

"ಬಹಿರಂಗ ವಾಗ್ವಾದ ಗೋಷ್ಠಿ. ನಡೆಯಲಿ" ಎಂಬ ಶ್ರೀ ಜಗದ್ಗುರುಗಳ ಮಾತಿಗೆ ನೀವು ಉತ್ತರವನ್ನೇ ಕೊಡದಿದ್ದುದು, ಆ ವಿಷಯವನ್ನೇ ನಿಮ್ಮ ಬರಹದಲ್ಲಿ ಮರೆ ಮಾಚಿರುವುದು ಇವು ನಿಮ್ಮ ಅಸಹಾಯಕ ಸ್ಥಿತಿ - ಅಧೈರ್ಯ ದ್ಯೋತಕ. ಏಕೆಂದರೆ ಸಮರ್ಥ ರೀತಿಯಲ್ಲಿ ಈ ಬಗ್ಗೆ ನಡೆದ ಬಹಿರಂಗವಾದ ಸಭೆಯಲ್ಲಿ ನೀವು ಎಂದೂ ಜಯಗಳಿಸಿಲ್ಲ ಹಿಂದೊಮ್ಮೆ ಪ್ರಯಾಗದಲ್ಲಿ ಶ್ರೀ ಕರಪಾತ್ರಿ ಸ್ವಾಮಿಯವರ ನೇತೃತ್ವದಲ್ಲಿ ನಡೆದ ವಾದ ಸಭೆಯಲ್ಲಿ ನಿಮಗೆ ಜಯವಾಗುವುದಿಲ್ಲವೆಂಬ ವಾತಾವರಣ ಉಂಟಾಗುತ್ತಿದ್ದಂತೆಯೇ ಯಾರಿಗೂ ಸುಳಿವು ಕೊಡದೆ ರಾತ್ರೋರಾತ್ರಿ ಅಲ್ಲಿಂದ ನಿಮ್ಮ ಬಿಡಾರ ಕಿತ್ತು ಓಡಿಬಂದು ನಿಮ್ಮ ಮಠ ಸೇರಿಕೊಂಡ ಮೇಲೆ "ನೀವೇ ಜಯಿಸಿದಿರಿ" ಎಂದು ವಿಜಯ ಪತಾಕೆ

ಹಾಕಿಕೊಂಡಿದ್ದು ಎಲ್ಲರಿಗೂ ತಿಳಿದೇ ಇದೆ. ಆದರೆ ಅಂದು ಪ್ರಯಾಗದ ನಾದ ಸಭೆಯಲ್ಲಿ ನಡೆದ ಸತ್ಯ ಸಂಗತಿಯ ವಿವರಗಳನ್ನೆಲ್ಲಾ ಈಗಲೂ ದಾಖಲೆಗಳಲ್ಲಿ ನೋಡಬಹುದು. ಈಗ ನೀವು ಶೃಂಗೇರಿಗೆ ಬಂದು ಹೋದ ನಂತರ ಮಾಡಿರುವುದೂ ಅದೇ ಕುಹಕತನ. ಇದೇ ದ್ವೈತ ವಿಜಯ.

ಕೆಲವು ತಿಂಗಳುಗಳ ಹಿಂದೆ ನಂಜನಗೂಡಿನಲ್ಲಿ ನಡೆದ ಸಮಾರಂಭವೊಂದರಲ್ಲಿ ನೀವು, ಶ್ರೀ ಪೇಜಾವರ ಸ್ವಾಮಿಗಳು ಶ್ರೀ ರಾಮಾನುಜ ಸಂಪ್ರದಾಯದ ಪೀಠಾಧೀಶರೂ ಇದ್ದು ರಾತ್ರಿ ಸಭೆಯ ಕಾರ್ಯಕ್ರಮ ಮುಗಿದು ವಂದನಾರ್ಪಣೆಯಾಗಿ ಬೇರೆ ಸಂಪ್ರದಾಯಗಳ ಪೀಠಾಧೀಶರು ಸಭೆಯಿಂದ ನಿರ್ಗಮಿಸಿದ ನಂತರ ಮುಂದಿನ ಸಂಗೀತ-ಭಜನೆ ಕಾರ್ಯಕ್ರಮ ಪ್ರಾರಂಭವಾಯಿತು. ಆದರೆ ನೀವು ಅದನ್ನು ಅಲ್ಲಿಗೆ ನಿಲ್ಲಿಸುವಂತೆ ಸೂಚಿಸಿ ಶ್ರೀ ಪೇಜಾವರ ಸ್ವಾಮಿಗಳನ್ನು ಮತ್ತೆ ಉಪನ್ಯಾಸ ಪ್ರಾರಂಭಿಸಲು ಪ್ರಚೋದನೆ ನೀಡಿ "ಶಂಕರರಿಗಾಗಲೀ, ರಾಮಾನುಜರಿಗಾಗಲೀ ಭಗವತ್ಸಾಕ್ಷಾತ್ಕಾರ ಆಗಲೇ ಇಲ್ಲ, ಶ್ರೀ ಮಧ್ವಾಚಾರ್ಯರೊಬ್ಬರೇ ಭಗವತ್ಸಾಕ್ಷಾತ್ಕಾರದ ಭಾಗ್ಯ ಪಡೆದವರು" ಇತ್ಯಾದಿ ನಿರೂಪಣೆ ಮಾಡಿಸಿದಿರಿ. ತ್ರಿಮತಸ್ಥರೂ ಒಂದುಗೂಡಿ ಶ್ರಮಿಸಿ ಏರ್ಪಡಿಸಿದ್ದ ಆ ಸಮಾರಂಭಕ್ಕೆ ಮಸಿ ಬಳಿಯುವ ನಿಮ್ಮ ಈ ಉಪದ್ವ್ಯಾಪವನ್ನು ಯುವಕರು ಪ್ರತಿಭಟಿಸಲು ತೊಡಗಿದಾಗ ಹಾರಿಕೆ-ಚಾರಿಕೆಯ ಉತ್ತರ ಕೊಟ್ಟಿರೆಂಬುದು ಎಲ್ಲ ಕಡೆ ಪ್ರಚಾರವಾಗಿದೆ. ಇಂತಹ ಉಪದ್ವ್ಯಾಪಗಳಿಂದ ಸೌಹಾರ್ದಯುತವಾಗಿ ಬಾಳುತ್ತಿರುವ ತ್ರಿಮತಸ್ಥರಲ್ಲಿ ವಿರಸ ಉಂಟಾದೀತಷ್ಟೆ ಹೊರತು ನಿಮ್ಮ ಸಿದ್ಧಾಂತ-ಆಚಾರ್ಯರಿಗೆ ಸರ್ವಶ್ರೇಷ್ಠತ್ವ ಎಂದೂ ಪ್ರಾಪ್ತವಾಗಲಾರದು. ಅಷ್ಟು ಮಾತ್ರವಲ್ಲ, ಇವು ನಿಮ್ಮ ಸಿದ್ಧಾಂತಕ್ಕೆ-ಆಚಾರ್ಯರಿಗೆ ಮಾಡುತ್ತಿರುವ ಅಪಚಾರವೂ ಕೂಡಾ.

ಇನ್ನು ನಿಮ್ಮ ಪ್ರಕಟಣೆಯ 10 ಅಂಶಗಳ ವಿಭಾಗದಲ್ಲಿ ಕೊನೆಯ 3 ಅಂಶಗಳಲ್ಲಿ ನೀವು ತುಂಬಿಸಿರುವ "ಕಾಗಕ್ಕ-ಗುಬ್ಬಕ್ಕ" ಮಕ್ಕಳ ಕಥೆಯಂತಹ ಯಮಧರ್ಮರಾಯನ ಆಸ್ಥಾನದ ಪ್ರಹಸನ:- ಮೊಟ್ಟಮೊದಲಿಗೆ ಇದು ನಿಮ್ಮ ಅಜ್ಞಾನವನ್ನು ತೆರೆದು ತೋರಿಸುತ್ತದೆ. ಸಂನ್ಯಾಸಿಗಳಿಗೆ ಯಮದರ್ಶನವಿಲ್ಲವೆಂಬ ಉಪನಿಷದ್ವಾಕ್ಯಕ್ಕೆ ಕೂಡ ನಿಮ್ಮ ಮತದಲ್ಲಿ ಸ್ಥಾನವಿಲ್ಲವೆ? ಅಥವಾ ಆತುರಗಾರನಿಗೆ ಬುದ್ಧಿಮಂದ (ಮೌಢ್ಯ) ಎಂಬತೆ ನಿಮ್ಮ ದ್ವೈತ ಸಿದ್ಧಾಂತವನ್ನು ಮೇಲಕ್ಕೆ ಎತ್ತಿ ಹಿಡಿಯುವ ಭರದಲ್ಲಿ ಉಪನಿಷದ್ವಾಕ್ಯವೂ ನಿಮಗೆ ಮರೆತು ಹೋಗಿದೆಯೋ? ಆಚಾರ್ಯ ಶ್ರೀ ಶಂಕರರ ಬಗ್ಗೆ ಗೌರವವಿಲ್ಲವಾದ್ದರಿಂದ ಅವರನ್ನು ಯಮಲೋಕಕ್ಕೆ ಕರೆಸಿದ ನೀವು ನಿಮ್ಮ ಶ್ರೀ ಮಧ್ವಾಚಾರ್ಯರಿಗೂ ಯಮದರ್ಶನ



ಮಾಡಿಸಿ ಪುಣ್ಯ ಕಟ್ಟಿಕೊಂಡಿರಲ್ಲ.! ಇದಕ್ಕಿಂತ ಹೆಚ್ಚಿನ ಬಾಲಿಶತನ ಯಾವುದಾದರೂ ಉಂಟೇ? "ಸಹಸ್ರಶೋ ಅರುನ್ಮುಖಾನ್ ಯತೀನ್ ಸಾಲಾವೃಕೇಭ್ಯಃ ಪ್ರಾಯಚ್ಛಂ! ತೇನ ಮೇ ಲೋಮ ಚ ನ ಮೀಯತೇ||" ಇದು ಉಪನಿಷದ್ವಾಕ್ಯ. ಯತಿಗಳಿಗೆ ಪರಗತಿಯ ವಿಷಯದಲ್ಲಿ ಅಧಿಕಾರ ಹೊಂದಿರುವ ಶ್ರೀ ಇಂದ್ರದೇವತೆಯ ಮಾತು ಇದು. ಈ ವಿಷಯದಲ್ಲಿ ಯಮಧರ್ಮನಿಗೆ ಯಾವ ಅಧಿಕಾರ ಇಲ್ಲ ಜ್ಞಾಪಕದಲ್ಲಿಟ್ಟುಕೊಳ್ಳಿ. ಇಂತಹ ಬಾಲಿಶ ಕುಹಕ ಪ್ರಹಸನಗಳನ್ನು ಕಲ್ಪಿಸಿ ಬರೆದು ಪ್ರಕಟಿಸುವುದು ಸಂನ್ಯಾಸಿಗಳಾದ ಮಠಾಧಿಪತಿಗಳಿಗೆ ಹೇಳಿಸಿದ ಕೃತ್ಯವಲ್ಲ. ಅದೂ ಅಲ್ಲದೆ "ಯದ್ಗತ್ವಾ-ನ ನಿವರ್ತಂತೇ ತದ್ಧಾಮ ಪರಮಂ ಮಮ" ಎಂಬ ಗೀತಾವಾಕ್ಯ, "ನ ಸ ಪುನರಾವರ್ತತೇ" ಎಂಬ ಶ್ರುತಿವಾಕ್ಯಗಳಿದ್ದು ಇಂತಹ ಲೇವಡಿಯನ್ನೊಳಗೊಂಡ ಬರಹಕ್ಕೆ ನಿಮ್ಮ ಅಂತರಾತ್ಮ ಪ್ರವೃತ್ತವಾದುದು ಮಹದಾಶ್ಚರ್ಯವೇ ಸರಿ. ನಿಮ್ಮ ಆಚಾರ್ಯರಿಗೆ ಕೇವಲ ಬಾಹ್ಯ ಚಕ್ಷುವಿನಿಂದ ನೋಡಿದುದೆಲ್ಲ ಪರಮಸತ್ಯವಷ್ಟೆ? ಹಾಲು ಹೇಗಿದೆ? ಎಂದು ಕೇಳಿದರೆ ಎಲ್ಲರಂತೆ "ಅದು ರುಚಿಯಾಗಿದೆ" ಎಂದೇ ನೀವು ಹೇಳಬೇಕಾಗುತ್ತದೆ. ರುಚಿಯನ್ನು ಕಂಡಿದ್ದೀರಾ? ಎಂದು ಪ್ರಶ್ನಿಸಿದರೆ ಎಲ್ಲರಂತೆ "ಕಂಡಿಲ್ಲ" ಎಂಬುದನ್ನೇ ನೀವು ಹೇಳುವುದು ಅನಿವಾರ್ಯ. ಒಂದು ವೇಳೆ ರುಚಿಯನ್ನು ಕಣ್ಣಾರೆ ಕಂಡಿದ್ದೇನೆಂದು ನೀವು ಹೇಳಿದರೆ ಅದು ಅಪ್ಪಟ ಸುಳ್ಳು. ಆದರೆ ಅದ್ವೈತ ಸಿದ್ಧಾಂತದ ಪ್ರಕಾರ ಆತ್ಯಂತಿಕವಾದ ಗುರಿ ಬ್ರಹ್ಮಾನುಭವ. ಅದು ನಿಮ್ಮ ಸಿದ್ಧಾಂತದಂತೆ ಚಕ್ಷುಗಮ್ಯವಲ್ಲ.! ಅನುಭವ ಗಮ್ಯ. ಅಂದರೆ ಕಣ್ಣಿನಿಂದ ನೋಡಲಾಗದಿದ್ದರೂ ಅನುಭವಕ್ಕೆ ವೇದ್ಯವಾಗುವ ಹಾಲಿನ ರುಚಿಯಂತೆ. ಅಂದಮೇಲೆ ಪರಮ ಸತ್ಯಕ್ಕೂ ನಿಮಗೂ ವಿಪರೀತ ಅಂತರ. ಅದನ್ನು ಪಡೆಯುವ ದಾರಿ ನಿಮಗೆ ತಿಳಿದೂ ಇಲ್ಲ. ಲೌಕಿಕ ರೀತಿಯಲ್ಲಿ ಕೂಡ ನಿಮ್ಮ ಈ ಕುಹಕತನ ಎಷ್ಟು ಅಸಂಬದ್ಧ ಎಂಬುದನ್ನು ನೋಡಿ:- ಶ್ರೀ ಶಂಕರ ಭಗವತ್ಪಾದರು ರುದ್ರ ದೇವರ ಆವೇಶ ಉಳ್ಳವರೆಂಬುದನ್ನು ಪದ್ಮ ಪುರಾಣದ ಆಧಾರ ತೋರಿಸಿ ನಿಮ್ಮ ಬರಹದಲ್ಲಿ ನೀವೇ ಒಪ್ಪಿಕೊಂಡಿದ್ದೀರಿ. ರುದ್ರ ದೇವರೇ ಮಹಾದೇವ-ಮಹಾಕಾಲ ಎಂಬುದಂತೂ ಸ್ಪಷ್ಟವೇ ಇದೆ. ಮಹಾದೇವನಿಂದಲೇ ನಿಯಂತ್ರಿಸಲ್ಪಡುವ ಯಮ ಅಂದರೆ ಕಾಲನೆ. ಮಹಾಕಾಲ ಸ್ವರೂಪರಾದ ಶ್ರೀ ಶಂಕರರನ್ನು ಕಾಲ ಪುರುಷ ಯಮನು ತನ್ನ ನ್ಯಾಯ ಸ್ಥಾನಕ್ಕೆ ಕರೆಸಿಕೊಳ್ಳಬಲ್ಲನೆಂಬುದು ಸಾಧ್ಯವೇ ಇಲ್ಲದ ಸಂಗತಿ. ಆದ್ದರಿಂದ ಸಾಕ್ಷಿ ಹೇಳಲು ಶ್ರೀ ಶಂಕರರನ್ನು ಕಾಲ ಪುರುಷ ಯಮನು ತನ್ನ ಬಳಿಗೆ ಕರೆಸಿಕೊಂಡನೆಂಬ ನಿಮ್ಮ ಮಾತು ತರ್ಕಬದ್ಧವೂ ಆಗುವುದಿಲ್ಲ. ಆಸ್ತಿಕ ಜನತೆಯ ಭಕ್ತಿ, ಗೌರವಗಳಿಗೆ ಪಾತ್ರರಾಗಿರುವ ಆಚಾರ್ಯರುಗಳ ಬಗ್ಗೆ ಇಂತಹ ಕೀಳು ಮಟ್ಟದ

ಭಾವನೆಯನ್ನು ಬರಹ ಮೂಲಕ ಪ್ರಚಾರ ನಡಿಸಿ ಆಚಾರ್ಯರ ಅನುಯಾಯಿಗಳಿಗೆ ನೋವು ಉಂಟುಮಾಡಿರುವುದರಿಂದ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುವುದರ ಅರಿವೇ ನಿಮಗಿಲ್ಲವೆಂದು ತೋರುತ್ತದೆ.

ಭಾರತದಲ್ಲಿ ಎಷ್ಟೋ ಒಂದು ಪ್ರಾಂತ್ಯಗಳಿವೆ. ಎಷ್ಟೋ ಒಂದು ಜಿಲ್ಲೆಗಳಿವೆ. ಎಲ್ಲಾ ಜಿಲ್ಲೆ-ಎಲ್ಲಾ ಪ್ರಾಂತ್ಯಗಳಲ್ಲೂ ಶ್ರೀ ಶಂಕರ ಸಂಪ್ರದಾಯದವರು ಹೇರಳವಾಗಿದ್ದಾರೆ. ಆದರೆ ನಿಮ್ಮ ಸಂಪ್ರದಾಯದವರು ಕನ್ನಡ ಜಿಲ್ಲೆಯಲ್ಲೂ ಬಹುಮತದಲ್ಲಿಲ್ಲ ಎಂಬ ವಿಚಾರವನ್ನು ಗಮನಿಸಿ. "ಶ್ರೀ ಶಂಕರಾಚಾರ್ಯರನ್ನು ಜಗದ್ಗುರುಗಳೆಂದು ಯಾರೂ ಕರೆಯಬಾರದು..........ಆದ್ದರಿಂದ ನೀವು (ಶ್ರೀ ಶಂಕರಾಚಾರ್ಯರು) ಜಗದ್ಗುರುಗಳೆಂದು ಹೇಳಿಕೊಳ್ಳಬಾರದು" ಮುಂತಾದ ನಿಮ್ಮ ನಿರ್ದೇಶಗಳಿಗೂ ಬುದ್ಧಿ ಬಲಿಯದ ಮಕ್ಕಳು ಜಗಳವಾಡುವಾಗ ಬಳಸುವ ಮಾತುಗಳಿಗೂ ಒಂದಿಷ್ಟೂ ವ್ಯತ್ಯಾಸವಿಲ್ಲ. ಶ್ರೀ ಶಂಕರ ಭಗವತ್ಪಾದರು ತಮ್ಮನ್ನು ತಾವೇ ಜಗದ್ಗುರುವೆಂದು ಹೇಳಿಕೊಂಡರೆಂಬುದಕ್ಕೆ ಯಾವ ಆಧಾರವೂ ಇಲ್ಲ. ಇನ್ನು ಸನಾತನ ಧರ್ಮದ ದಿವ್ಯ ಜ್ಯೋತಿಯನ್ನು ಅಮೃತ ಸದೃಶ ಅದ್ವೈತ ತತ್ತ್ವದ ತೈಲ ಧಾರೆಯಿಂದ ಪ್ರಜ್ವಲಗೊಳಿಸಿ ಅದು ವಿಶ್ವ ಮಾನವ ತತ್ತ್ವ ಎಂದು ಜಗತ್ತಿಗೆ ಕಾಣಿಸಿಕೊಟ್ಟ ಆಚಾರ್ಯ ಶ್ರೀ ಶಂಕರರನ್ನು ಮುಂದೆ ಪ್ರಪಂಚವೇ ಜಗದ್ಗುರು ಎಂದು ಕರೆದು ಗೌರವ ಸಲ್ಲಿಸುತ್ತ ಬಂದಿದೆ. ಜಗತ್ತಿನ ಜನ ಹಾಗೆ ಮಾಕೂಡದೆಂದು ಅಪ್ಪಣೆ ಮಾಡಲು ನಿಮಗೇನು ಅಧಿಕಾರ? ವಿದ್ವಾಂಸರು - ತತ್ತ್ವಚಿಂತಕರು - ಹಿರಿಯ ವಯಸ್ಸಿನವರು ಯಾರೂ ಇಂತಹ ಅಪ್ರಬುದ್ಧ ಅಭಿಪ್ರಾಯಗಳಿಂದ ವಿಜೃಂಭಿಸುವುದನ್ನು ನಾವು ಕಂಡಿಲ್ಲ. ಇಂದಿನ ವೈಜ್ಞಾನಿಕ ಯುಗದಲ್ಲಿ ಕೂಡಾ ಅಧ್ಯಾತ್ಮ ತತ್ತ್ವ ಶಾಸ್ತ್ರಗಳ ವಿಷಯಗಳು ವೈಜ್ಞಾನಿಕ ವಿಚಾರಧಾರೆಯ ವಿಶ್ಲೇಷಣೆಗೆ ಒಳಪಟ್ಟಾಗ ಅದ್ವೈತ ತತ್ತ್ವವೇ ಅದಕ್ಕೆ ಸರಿ ದೊರೆಯಾಗಿ ನಿಲ್ಲುವ ಸಾಮರ್ಥ್ಯ ಪಡೆದಿದೆಯೆಂಬುದು ಸಹ ವಿಚಾರವೇತ್ತರಿಗೆ ಚೆನ್ನಾಗಿ ತಿಳಿದಿದೆ. ಇಂತಹ ವಿಚಾರವೇತ್ತರು ಜಗತ್ತಿನ ಎಲ್ಲೆಡೆಯೂ ಇದ್ದಾರೆ. ಭಾರತೀಯರೇ ಆಗಿ ವಿಶ್ವದಲ್ಲಿ ಖ್ಯಾತನಾಮರಾದ ಸ್ವಾಮಿ ವಿವೇಕಾನಂದರು, ಸರ್ವಪಲ್ಲಿ ರಾಧಾಕೃಷ್ಣನ್, ಪಂಡಿತ ಜವಹರಲಾಲ್ ನೆಹರೂ ಇಂತಹವರೆಲ್ಲಾ ಆಚಾರ್ಯ ಶ್ರೀ ಶಂಕರರು ಮತ್ತು ಅದ್ವೈತ ದರ್ಶನದ ಬಗ್ಗೆ ಏನು ಹೇಳಿದ್ದಾರೆಂಬುದನ್ನಾದರು ನೀವು ಗಮನಿಸಿದ್ದೀರಾ ? ಅದ್ವೈತ ದರ್ಶನ ಮತ್ತು ಆಚಾರ್ಯ ಶ್ರೀ ಶಂಕರರ ಹೆಸರು ಭೂಮಿಯಲ್ಲಿ ದೃಢವಾಗಿ ಬೇರುಗಳನ್ನು ಹರಡಿಕೊಂಡು ಬಾನಿನ ಎತ್ತರಕ್ಕೆ ಬೆಳೆದು ನಿಂತು ಸಾವಿರದ ಎರಡು ನೂರು ವರ್ಷಗಳು ಕಳೆದಿದೆ. ಇದು ಸದಾ ಸರ್ವದಾ ಹಚ್ಚಹಸುರಾಗಿಯೇ ಕಂಗೊಳಿಸುತ್ತ ಅದನ್ನು ಆಶ್ರಯಿಸುವವರಿಗೆ ತಂಪು ನೀಡುವ ಅಮರ ವೃಕ್ಷ- ಅದನ್ನು



ಕಿತ್ತು ಉರುಳಿಸಿ ಬಿಡುತ್ತೇನೆಂದು ನಿಮ್ಮವರೆಲ್ಲ ಹಲವು ಕಾಲದಿಂದ ನಡೆಸಿಕೊಂಡು ಬರುತ್ತಿರುವ ಪ್ರಯತ್ನ ವ್ಯರ್ಥವಾಗಿದೆ. ಇನ್ನೂ ನೀವು ಅದೇ ಪ್ರಯತ್ನ ಮುಂದುವರಿಸುವುದು "ಕೈಲಾಸ ಶಿಖರವನ್ನೇ ಕಿತ್ತು ಬಿಡುತ್ತೇನೆ" ಎಂದು ಪರ್ವತದ ಬುಡಕ್ಕೆ ಕೈಗಳನ್ನು ತೂರಿಸಿ ಒಂದಕ್ಕೂ ತೆಗೆದುಕೊಳ್ಳಲಾಗದೆ ಸಿಕ್ಕಿಹಾಕಿಕೊಂಡು ನೋವಿನಿಂದ ಒದ್ದಾಡಿದ ರಾವಣನ ಹುಚ್ಚುತನವೇ ಹೊರತು ಬೇರೆಯಲ್ಲ.

"ಹಿಂದೆ ಕೆಲವು ಅದ್ವೈತಿಗಳು ದ್ವೈತಸಿದ್ಧಾಂತವನ್ನು ಸ್ವೀಕರಿಸಿದರು. ದ್ವೈತದಿಂದ ಅದ್ವೈತಕ್ಕೆ ಹೋದವರ ಉದಾಹರಣೆ ಒಂದೂಇಲ್ಲ" ಇತ್ಯಾದಿ. ನಿಮ್ಮ ಪ್ರಜಲ್ಪದ ಮಾತುಗಳಿಗೆ ಈಗ ಒದಗುತ್ತಿರುವ ಗತಿಯಾದರೂ ಏನು ? ನಿಮ್ಮ ಉಡುಪಿ ಅಷ್ಟಮಠಗಳ ಪೈಕಿ 2 ಮಠಗಳ ಸ್ವಾಮಿಗಳು ಪೀಠಾಧಿಕಾರಕ್ಕೆ ಬಂದ ಕೆಲವೇ ಸಮಯದಲ್ಲಿ ನಿಮ್ಮ ಸಂಪ್ರದಾಯದಲ್ಲಿ ಹರಡಿರುವ ಮೌಢ್ಯ-ಕಶ್ಮಲಗಳಿಂದ ಜಿಗುಪ್ಸೆ ತಾಳಿ ಸಂನ್ಯಾಸವನ್ನೇ ಬಿಟ್ಟು ಮದುವೆ ಮಾಡಿಕೊಂಡರು. ಆ ಪರಿತ್ಯಕ್ತ ಪೀಠಗಳಲ್ಲಿ ಒಂದಾದ ಫಲಿಮಾರು ಮಠಕ್ಕೆ ನಿಯುಕ್ತರಾದ ನಿಮಗೇ ಇದನ್ನು ನಾವು ನೆನಪಿಸಿಕೊಡಬೇಕಾಗಿ ಬಂದಿದೆ. ಇತ್ತೀಚೆಗೆ ನಿಮ್ಮ ಉಡುಪಿಯ ಪೀಠದ ಇನ್ನೊಬ್ಬ ತರುಣ ಸಂನ್ಯಾಸಿಗಳು ಕೂಡ ನಿಮ್ಮ ಪರಿಸರವನ್ನು ತ್ಯಜಿಸಿ ವಿದೇಶಕ್ಕೆ ಹೋಗಿ ನೆಲೆಸುವಂತಾಯಿತು. ಇಂತಹ ಒಂದೇ ಒಂದು ಘಟನೆ ಕೂಡಾ ಶ್ರೀ ಶೃಂಗೇರಿಯೇ ಮೊದಲ್ಗೊಂಡು ಯಾವುದೇ ಅದ್ವೈತ ಸಂಪ್ರದಾಯದ ಪೀಠದಲ್ಲಿ ನಡೆದಿಲ್ಲ. ಆದರೆ ನಿಮ್ಮಲ್ಲಿ ಮಾತ್ರವೇ ನಡೆಯುತ್ತಿರುವ ಈ ಬಗೆಯ ಪ್ರಮಾದಗಳಿಂದ ಇಡೀ ಬ್ರಾಹ್ಮಣ ಸಮಾಜವೇ ಬೇರೆಯವರ ಗೇಲಿಗೆ ಒಳಗಾಗುತ್ತಿದೆ.

ಅದ್ವೈತಿಗಳು-ಸ್ಮಾರ್ತರು ಯಾವಾಗಲೂ ಸೌಹಾರ್ದತೆ-ಸಮನ್ವಯ ಭಾವನೆ-ಒಟ್ಟು ಸಮಾಜದ ಹಿತಚಿಂತನೆಗಳಲ್ಲಿ ಆಸಕ್ತಿ ಉಳ್ಳವರು. ಪ್ರಾಯಶಃ ಈ ಸಮಾಧಾನದ ಚಿತ್ತ-ವೃತ್ತಿಯನ್ನೇ ನೀವು ದೌರ್ಬಲ್ಯವೆಂದು ಭಾವಿಸಿ ಅವರುಗಳ ಅವಹೇಳನೆಯನ್ನೇ ಮುಖ್ಯ ಕಾಯಕವಾಗಿ ಮಾಡಿಕೊಂಡಿದ್ದೀರಿ. ಆದರೆ ಅದೇರೀತಿ ಮುಸ್ಲಿಂ-ಕ್ರಿಶ್ಚಿಯನ್ ಧರ್ಮಾನುಯಾಯಿಗಳನ್ನಾಗಲೀ ಕೊನೆಗೆ ಹಿಂದೂ ಧರ್ಮದವರೇ ಆದ ಶೈವ ಸಂಪ್ರದಾಯದ ಶಕ್ತಿ ವಿಶಿಷ್ಟಾದ್ವೈತಿಗಳನ್ನಾಗಲೀ ಕುರಿತು ಒಂದೇ ಒಂದು ಕುಚೋದ್ಯದ ಬರಹವನ್ನು ರಚಿಸಿ ಪ್ರಕಟಿಸಿ ನೋಡಿ ! ಆಗ ಅವರ ಇಡೀ ಸಮಾಜವೇ ಸಿಡಿದೆದ್ದು ಪ್ರಳಯ ಜ್ವಾಲೆಯನ್ನೇ ಹತ್ತಿಸಿ ಬಿಡುತ್ತದೆ.

ಪವಿತ್ರ ಗಾಯತ್ರೀ ಮಂತ್ರೋಪದೇಶ ಪಡೆಯುವವರೆಲ್ಲರೂ ಒಂದೇ. ವೈದಿಕ ಧರ್ಮದಲ್ಲಿ ನಂಬಿಕೆಯುಳ್ಳ ಹಿಂದೂಗಳೆಲ್ಲರೂ ಸಂಸಮಾನರು ಎಂಬ ವಾತಾವರಣ ನಿರ್ಮಿಸುವ ಮಹಾ ಪ್ರಯತ್ನಕ್ಕೆ ಕಲ್ಲು ಹಾಕಿ ಖುಷಿ ಪಡುವ ವಿಘ್ನಸಂತೋಷಿಗಳಾಗುವ ಬದಲು "ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ" ಎಂಬ ಸೂಕ್ತಿಗೆ ಗಮನ ಕೊಡುವುದು ಉತ್ತಮ ಮಾರ್ಗ. ಕೊನೆಯ ಪಕ್ಷ ನಿಮ್ಮ ಮತದ ಎಲ್ಲ ಅನುಯಾಯಿಗಳಿಗಾದರೂ ಸಂತೋಷವಾಗುವಂತೆ ನಡೆದುಕೊಳ್ಳುವುದು ಒಳ್ಳೆಯದು. ಈಗ ನಿಮ್ಮಿಂದ ಆಗಬೇಕಾದುದು ಬೇರೆಯವರ ಉದ್ಧಾರ ಕಾರ್ಯವಲ್ಲ. ಹೊಲಸು ನಾರುತ್ತಿರುವ ನಿಮ್ಮ ಪರಿಸರವನ್ನು ಸ್ವಚ್ಛಗೊಳಿಸಿಕೊಳ್ಳಬೇಕಾದುದು ನಿಮ್ಮ ಪೀಠಾಧಿಪತಿಗಳೆಲ್ಲರ ಹೊಣೆ. ಅದನ್ನೇ ಸಾಧಿಸಲಾರದ ನೀವು ಅದ್ವೈತಿಗಳು ನರಕದ ದಾರಿಯಲ್ಲಿದ್ದಾರೆ ಎಂಬ ಭ್ರಾಂತಿಯನ್ನು ಹಚ್ಚಿಕೊಂಡು ಅವರನ್ನು ಉದ್ಧರಿಸುತ್ತೇವೆಂದು ಹುಚ್ಚಾಟಕ್ಕೆ ತೊಡಗುವುದು ಬೇಡ. ಅದ್ವೈತಿಗಳನ್ನು ಅವರ ಪಾಡಿಗೆ ಬಿಟ್ಟು ನಿಮ್ಮ ಪಾಡನ್ನು ನೀವು ನೋಡಿಕೊಳ್ಳಿ.

ಅದ್ವೈತ ಸಿದ್ಧಾಂತ– ಆಚಾರ್ಯ ಶ್ರೀ ಶಂಕರರು ಅವರ ಪರಂಪರೆ ಹಾಗೂ ಸ್ಮಾರ್ತ ಜನಾಂಗದ ಮೇಲೆ ನಿಮಗೆ ಇರುವ ದ್ವೇಷ (ಅಭಿನಿವೇಶ) - ಸ್ಪಷ್ಟಗೊಂಡಿದೆ. ಆದರೆ ಬೇರೆ ಆಚಾರ್ಯರು-ಅವರ ಸಿದ್ಧಾಂತ-ಅವರ ಅನುಯಾಯಿಗಳು ಮತ್ತು ದ್ವೈತ ಸಂಪ್ರದಾಯವೂ ಸೇರಿದಂತೆ ಯಾವ ಅಥವಾ ಯಾರ ವಿಷಯದಲ್ಲಿಯೋ ಆದರೂ ನಮಗೆ ಸಮಾನ ಭಾವನೆ ಇದೆಯೇ ಹೊರತು ಯಾವ ತಾರತಮ್ಯ ಭಾವವೂ ನಮಗಿಲ್ಲ. ಆದ್ದರಿಂದಲೇ ಈ ಲೇಖನವನ್ನು ಕೇವಲ ನಿಮಗಾಗಿ ಎಂದೇ ನೇರವಾಗಿ ನಿಮಗೇ ಬರೆದಿದ್ದಾಗಿದೆ. ಈ ಲೇಖನವನ್ನು ನಾವು ನಿಮಗೆ ಬರೆಯಲೇಬೇಕಾಗಿ ಬಂದುದಕ್ಕೆ ನಿಮ್ಮ ಮಿತಿಮೀರಿದ ಉಪದ್ವ್ಯಾಪಗಳೇ ಮುಖ್ಯ ಕಾರಣ ಹೊರತು ಇಂತಹ ಕಾರ್ಯದಲ್ಲಿ ಕಾಲದ ಅಪವ್ಯಯ ಮಾಡುವುದು ನಮಗೆ ಸರ್ವಥಾ ಪ್ರಿಯವಾದುದಲ್ಲ. ಆದ್ದರಿಂದ ಇದಕ್ಕೆ ನೀವು ತಿರುಗಿ ಬರೆಯುವ ಅಷ್ಟೋತ್ತರದ ಉತ್ತರವನ್ನು ತೆರೆದುಕೂಡ ನೋಡದೆ ಕಸದ ಬುಟ್ಟಿಗೆ ಎಸೆದು ಅದಕ್ಕೆ ತಕ್ಕ ಸ್ಥಾನ ತೋರಿಸಲಾಗುತ್ತದೆ.

ಶ್ರೀ ಸ್ವಾಮೀಜಿ,
"ಶ್ರೀ ಮಠ" ಹರಿಹರಪುರ
ಚಿಕ್ಕಮಗಳೂರು ಜಿಲೆ